ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1718 (2053)
ಉತ್ತರಿಸುವ ದಿನಾಂಕ	24-03-2021
ಮಾನ್ಯ ಸದಸ್ಯರ ಹೆಸರು	ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
(ಅ)	ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ತಿಮ್ಮಸಂದ್ರ ಗ್ರಾಮಕ್ಕೆ ಸೇರಿದ ಸರ್ವೆ ನಂ.46ರಲ್ಲಿ ಮೂರು ಎಕರೆ 18 ಗುಂಟೆ ಹಾಗೂ ಸರ್ವೆ ನಂಬರ್ 47 ಎರಡು ಎಕರೆ 14 ಗುಂಟೆ ಜಮೀನಿಗೆ ಸಂಬಂಧಿಸಿದಂತೆ 2001ನೇ ಸಾಲಿನ ಅವಧಿಯಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ರಾಜ್ ಘಾಟ್ ಶಾಖೆ, ಇಲ್ಲಿ ಅಡಮಾನ ಕೃಷಿ (ದ್ರಾಕ್ಷಿ) ಸಾಲ ಪಡೆದಿರುವುದು ನಿಜವೇ;	2001ನೇ ಸಾಲಿನ ಅವಧಿಯಲ್ಲಿ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ರಾಜ್ ಘಾಟ್ ಶಾಖೆ, ಇಲ್ಲಿ ಅಡಮಾನ ಸಾಲ ಪಡೆದಿರುವುದಿಲ್ಲ. ದೊಡ್ಡಬಳ್ಳಾಪುರ ಉಪ ನೋಂದಣಿ ಕಚೇರಿಯಲ್ಲಿನ ವಿವರಣಾತ್ಮಕ ಅನುಸೂಚಿ (Index-II) ಯನ್ನು ಪರಿಶೀಲಿಸಲಾಗಿದೆ.
(ಆ)	ಹಾಗಿದ್ದಲ್ಲಿ, ಸದರಿ ಜಮೀನನ್ನು ಸಾಲ ನೀಡಿದ ಬ್ಯಾಂಕಿನ ಹೆಸರಿಗೆ ನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಣಿ ಮಾಡಿದ್ದಾರೆಯೇ; ಮಾಡಿದ್ದಲ್ಲಿ, ಯಾವ ದಿನಾಂಕದಂದು ನೋಂದಣಿಯಾಗಿದೆ; (ವಿವರ ಒದಗಿಸುವುದು)	ಉದ್ಭವಿಸುವುದಿಲ್ಲ.
(ಇ)	ಸದರಿ ಸ್ವತ್ತು ಬ್ಯಾಂಕಿನ ಹೆಸರಿಗೆ ಅಡಮಾನ ನೋಂದಣಿಯಾಗಿದ್ದರು ಸಹ ದೊಡ್ಡಬಳ್ಳಾಪುರ ಉಪ ನೋಂದಣಾಧಿಕಾರಿ ಅವರ ಕಛೇರಿಯಲ್ಲಿ ಬೇರೆ ಬೇರೆಯವರ ಹೆಸರಿಗೆ ಕ್ರಯ ನೋಂದಣಿ ಮಾಡಿದ್ದು, ನಿಜವೇ; ಹಾಗಿದ್ದಲ್ಲಿ, ಸದರಿ ನೋಂದಣಿ ಪ್ರಕ್ರಿಯೆ ಕಾನೂನು ಬಾಹಿರ ಅಲ್ಲವೇ;	ಅನ್ವಯಿಸುವುದಿಲ್ಲ.

(ಈ)	ಕಾನೂನುಬಾಹಿರ ಕ್ರಯ ಮಾಡಿರುವುದಕ್ಕೆ ದಿನಾಂಕ:19-01-2005 ರಂದು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ರಾಜ್ ಘಾಟ್ ಶಾಖೆಯವರ ಆಕ್ಷೇಪಣೆ ವ್ಯಕ್ತಪಡಿಸಿ ಉಪ ನೋಂದಣಾಧಿಕಾರಿ, ದೊಡ್ಡಬಳ್ಳಾಪುರ ಇವರಿಗೆ ಪತ್ರ ಬರೆದಿರುವುದು ನಿಜವೇ; ಪತ್ರದ ಪ್ರತಿಯನ್ನು ಒದಗಿಸುವುದು.	ಸದರಿ ಜಮೀನಿಗೆ ಸಂಬಂಧಿಸಿದಂತೆ ದೊಡ್ಡಬಳ್ಳಾಪುರ ಉಪ ನೋಂದಣಿ ಕಚೇರಿಯ ತಕರಾರು ಪುಸ್ತಕದಲ್ಲಿ ಯಾವುದೇ ತಕರಾರು / ಆಕ್ಷೇಪಣೆ ನಮೂದಾಗಿರುವುದಿಲ್ಲ ಮತ್ತು ಬ್ಯಾಂಕಿನಿಂದ ಪತ್ರ ವ್ಯವಹಾರಗಳನ್ನು ಮಾಡಿರುವುದಕ್ಕೆ ಯಾವುದೇ ದಾಖಲೆ ಲಭ್ಯವಿರುವುದಿಲ್ಲ.
(ಉ)	ಕಾನೂನು ಬಾಹಿರವಾಗಿ ಕ್ರಯ ನೋಂದಣಿಯಾದ ಸದರಿ ಸ್ವತ್ತಿನ ನೋಂದಣಿ ಪ್ರಕ್ರಿಯೆಯನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಯಾವ ಕಾಲಮಿತಿಯೊಳಗಡೆ ಉದ್ಭವಿಸುವುದಿಲ್ಲ. ಕ್ರಮ ಜರುಗಿಸಲಾಗುವುದು?	ಅನ್ವಯಿಸುವುದಿಲ್ಲ.

ಸಂಖ್ಯೆ: ಕಂಇ-ಎಂಎನ್ಎಸ್ಎ-148/2021

(ಆರ್ ಅಶೋಕ್)
ಕಂದಾಯ ಸಚಿವರು